# ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿ ಸಿ ನಂ. 394/2012

ಪಿರ್ಯಾದಿ : ಸರ್ಕಾರದ ಪರವಾಗಿ ಹೊಳಲ್ಕೆರೆ ಪೋಲೀಸರು

– ವಿರುದ್ಧ–

ಆರೋಪಿ : ಶಿವಮೂರ್ತಿ ತಂದೆ ಬಸವರಾಜಪ್ಪ, 40 ವರ್ಷ, ಜಿರಾಯ್ತಿ,
ಎಲೆಬೇತೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

## :: ದೋ ಷಾ ರೋ ಪ ಣೆ ::

ನಾನು ಶ್ರೀ ಎಸ್.ಜಿ. ಸಲಗರೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ, ಆರೋಪಿಯಾದ ನಿನ್ನ ಮೇಲೆ ಮಾಡುವ ಆರೋಪಣೆ ಏನೆಂದರೆ.

ಮೊದಲನೆಯದಾಗಿ, ಆರೋಪಿಯಾದ ನೀನು ಸಾಕ್ಷಿ–1 ಸುಜಾತಳನ್ನು 2005ನೇ ಸಾಲಿನಲ್ಲಿ ಮದುವೆ ಆಗಿ 3–4 ವರ್ಷ ಅನ್ಯೋನ್ಯವಾಗಿದ್ದು, ನಂತರ ಆರೋಪಿಯಾದ ನೀನು ಸಾಕ್ಷಿ–1 ಸುಜಾತಳಿಗೆ ಬೈದಾಡುವುದು, ಹೊಡೆಯುವುದು ಮಾಡಿ ಅವಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡಿದ್ದರಿಂದ ಆರೋಪಿತರಾದ ನೀವುಗಳು ಭಾ.ದಂ.ಸಂಹಿತೆ ಕಲಂ 498(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜೆದೊಳಗೆ ಮಾಡುತ್ತೀರೆಂದು,

ಎರಡನೆಯದಾಗಿ, ದಿನಾಂಕ: 13–02–2012ರಂದು ಬೆಳಿಗ್ಗೆ 11–00 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ರಂಗಾಪುರ ಗ್ರಾಮದ ಸಾಕ್ಷಿ–1 ಸುಜಾತ ರವರ ಮನೆ ಮುಂಭಾಗದಲ್ಲಿ ಆರೋಪಿಯಾದ ನೀನು ಸಾಕ್ಷಿ–1 ಸುಜಾತಳಿಗೆ ನೀನು ಬಂಜೆ ಮತ್ತು ಬೋಸುಡಿಮುಂಡೆ ಅಂತ ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ ಅವರಿಗೆ ಶಾಂತಿ ಭಂಗ ಉಂಟು ಮಾಡುವಂತೆ ಪ್ರಚೋದನೆ ಮಾಡಿದ್ದರಿಂದ ಆರೋಪಿಯಾದ ನೀನು ಭಾ.ದಂ.ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ–1 ಸುಜಾತಳಿಗೆ ನೀನು ಬಂಜೆ, ನಮ್ಮೂರಿಗೇನಾದರೂ ಬಂದರೆ ನಿನ್ನ ಪ್ರಾಣ ತೆಗೆಯುತ್ತೇನೆ ಅಂತ ಪ್ರಾಣ ಬೆದರಿಕೆ ಹಾಕಿದ್ದರಿಂದ ಆರೋಪಿಯಾದ ನೀನು ಭಾ.ದಂ.ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜೆದೊಳಗೆ ಮಾಡುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ

20/10/14

ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹೊಳಲ್ಕೆರೆ.

**ಹಿರಿಯ ಶ್ರೇಣಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ**
**ಸಿ.ಸಿ.109/2018**

ಫಿರ್ಯಾಧಿದಾರ : ಕರ್ನಾಟಕ ರಾಜ್ಯ ಇವರ ಪರವಾಗಿ
ಹೊಳಲ್ಕೆರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : 3. ಸುಮಂಗಳಮ್ಮ ಕೋಂ ಬಸವರಾಜಪ್ಪ, ವಯಸ್ಸು ಸುಮಾರು 65 ವರ್ಷ, ಉದ್ಯೋಗ: ಮನೆ ಕೆಲಸ, ವಾಸ: ಯೆಲೆಬೆತ್ತೂರು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

:: **ದೋಷಾರೋಪಣೆ** ::

**ಪ್ರೇಮಾ ವಸಂತರಾವ್ ಪವಾರ್**., ಬಿ.ಕಾಂ., ಎಲ್.ಎಲ್.ಬಿ.(ಸ್ಪೆಷಲ್) ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ ಆದ ನಾನು ಮೇಲ್ಕಂಡ 3ನೇ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

1) ದಿನಾಂಕ: 13-02-2012 ರಂದು ಬೆಳಗ್ಗೆ ಸುಮಾರು 12-00 ಗಂಟೆ ಸಮಯದಲ್ಲಿ ಹೊಳಲ್ಕೆರೆ ಪೋಲೀಸ್ ಠಾಣಾ ವ್ಯಾಪ್ತಿಯ ರಂಗಾಪುರ ಗ್ರಾಮದಲ್ಲಿ ಚಾಸಾ-1 ರವರು ತನ್ನ ತಂದೆಯ ಮನೆಯಲ್ಲಿರುವಾಗ 3ನೇ ಆರೋಪಿಯಾದ ನೀವು 1 ಮತ್ತು 2ನೇ ಆರೋಪಿಗಳ ಜೊತೆಗೆ ಸೇರಿಕೊಂಡು ಚಾಸಾ-1 ರವರಿಗೆ ಬೈದಾಡುವುದು ಹೊಡೆಯುವುದು ಮಾಡಿ ಅವಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡಿದ್ದರಿಂದ 3ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರಡಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ.

2) ಮೇಲಿನ ಅಂಶ-1ರಲ್ಲಿ ಹೇಳಿರುವಂತಹ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಹಾಗೂ ಮೇಲೆ ಹೇಳಿದ ಕಾರಣದ ಮೇರೆಗೆ 3ನೇ ಆರೋಪಿಯಾದ ನೀವು 1 ಮತ್ತು 2ನೇ ಆರೋಪಿಗಳ ಜೊತೆಗೆ ಸೇರಿಕೊಂಡು ಚಾಸಾ-1 ರವರಿಗೆ ನೀನು ಬಂಜೆ ಮತ್ತು ಬೋಸುಡಿಮುಂಡೆ ಅಂತ ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ ಅವರಿಗೆ ಶಾಂತಿ ಭಂಗ

ಉಂಟು ಮಾಡುವಂತೆ ಪ್ರಚೋದನೆ ಮಾಡಿದ್ದರಿಂದ 3ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ.

3) ಮೇಲಿನ ಅಂಶ-1ರಲ್ಲಿ ಹೇಳಿರುವಂತಹ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಹಾಗೂ ಮೇಲೆ ಹೇಳಿದ ಕಾರಣದ ಮೇರೆಗೆ 3ನೇ ಆರೋಪಿಯಾದ ನೀವು 1 ಮತ್ತು 2ನೇ ಆರೋಪಿಗಳ ಜೊತೆಗೆ ಸೇರಿಕೊಂಡು ಚಾಸಾ-1 ರವರಿಗೆ ನೀನು ಬಂಜೆ ನಮ್ಮೂರಿಗೇನಾದರೂ ಬಂದರೆ ನಿನ್ನ ಪ್ರಾಣ ತೆಗೆಯುತ್ತೇನೆ ಅಂತ ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ಆ ಮೂಲಕ 3ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಎಂದು ಹೊಳಲ್ಕೆರೆ ಪೊಲೀಸ್ ಉಪನಿರೀಕ್ಷಕರವರು ನಿಮ್ಮ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ, 3ನೇ ಆರೋಪಿಯಾದ ನೀವು ಮೇಲ್ಕಂಡ ಆರೋಪಗಳನ್ನು ನನ್ನ ಸಂಜ್ಞೆಯಡಿ ವಿಚಾರಣೆ ಎದುರಿಸಬೇಕು.

20/2/20

(ಪ್ರೇಮಾ ವಸಂತರಾವ್ ಪವಾರ್)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಹೊಳಲ್ಕೆರೆ.

ದಿನಾಂಕ: 20. 2 .2020.